



ನಾರಾಯಣ್ ಅವರಿದ್ದ ಮನೆಯನ್ನು ಅವರ ಅಭಿಮಾನಿ ಓದುಗರ ಒತ್ತಾಸೆಯ ಮೇರೆಗೆ ಈಗ ಸ್ಮಾರಕವನ್ನಾಗಿ ಮಾಡಲಾಗಿದೆ. ದೊಡ್ಡ ನಿವೇಶನದ ಸುಂದರ ವಿಶಾಲ ಮನೆಯಲ್ಲಿ ಅದು ರೂಪುಗೊಂಡಿದೆ. ಅವರ ಜೀವನದ ವಿವಿಧ ಮಜಲುಗಳ ಚಿತ್ರಗಳು, ಬರೆದ ಎಲ್ಲಾ ಪುಸ್ತಕಗಳು, ಪಡೆದ ಪ್ರಶಸ್ತಿ ಪುರಸ್ಕಾರಗಳ ಫಲಕಗಳು, ಚಿತ್ರಗಳು, ಅವರು ಬಳಸುತ್ತಿದ್ದ ಮೇಜು, ಕುರ್ಚಿಗಳು, ಅವರ ವ್ಯಕ್ತಿತ್ವದ ನೆನಪುಗಳನ್ನು ಹಸಿರಾಗಿಸಿದೆ. ಅವರು ಗಳಿಸಿದ ಮನ್ನಣೆಗೆ ಸೂಕ್ತ ಸ್ಮಾರಕವನ್ನು ಮಾಡಲಾಗಿದೆ. ಈಗಿನ ಮೈಸೂರು ನಗರಪಾಲಿಕೆಯ ಕಮೀಷನರ್ ಅವರ ವೈಯಕ್ತಿಕ ಆಸಕ್ತಿಯಿಂದಾಗಿ, ರಿಯಲ್ ಎಸ್ಟೇಟ್ ನವರ ಪಾಲಾಗುತ್ತಿದ್ದ ನಾರಾಯಣ್ ಅವರ ಮನೆ, ಈಗ ಸಾಹಿತ್ಯ ಲೋಕದ ಅಮೂಲ್ಯ ಆಸ್ತಿಯಾಗಿ, ಇಂಗ್ಲಿಷ್ ಲೇಖಕನೊಬ್ಬನ ಜೀವಿತದ ನೆನಪುಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಅಂಗಳವಾಗಿದೆ.

ಇನ್ನೂ ಆಗಬೇಕಾದ್ದು ಈ ಸ್ಮಾರಕದಲ್ಲಿ ಹಲವು ಕೆಲಸಗಳು ಬಾಕಿ ಇವೆ. ನಾರಾಯಣ್ ಅವರ ಪುಸ್ತಕಗಳ ಹಸ್ತ ಪ್ರತಿಯ ಪ್ರದರ್ಶನ, ಅವರ ಪತ್ರ ವ್ಯವಹಾರ ವಿವರಗಳು, ದೇಶಾಟನೆ ಇತ್ಯಾದಿಗಳನ್ನು ಸೇರಿಸಬಹುದು. ನಾರಾಯಣ್ ಅವರನ್ನು ಇಂಗ್ಲಿಷ್ ಸಾಹಿತ್ಯ ಲೋಕಕ್ಕೆ ಪರಿಚಯಿಸಿದ, ಖ್ಯಾತ ಇಂಗ್ಲಿಷ್ ಲೇಖಕ ಗ್ರಹಾಂ ಗ್ರೀನ್ ಅವರೊಂದಿಗೆ ಒಡನಾಟ, ಪತ್ರವ್ಯವಹಾರ ಮುಂತಾದವನ್ನು ಅವರ ಓದುಗರು ಅಪೇಕ್ಷಿಸುತ್ತಾರೆ. ಜೊತೆಗೆ ಅಲ್ಲಿಯೇ ಕುಳಿತು ಅವರ ಬಗ್ಗೆ ಅಧ್ಯಯನ ಮಾಡಲು, ನಾರಾಯಣ್ ಅವರ ಸಾಹಿತ್ಯ ಕುರಿತು ಬಂದಿರುವ ಅಗಾಧ ವಿಮರ್ಶೆಯ ಕೃತಿಗಳನ್ನು, ಸಾಮಾನ್ಯ ಗ್ರಂಥ ಭಂಡಾರದಲ್ಲಿ ಸೇರ್ಪಡೆ ಮಾಡಬಹುದು.